# ಕನ್ನಡ ನೆಲದ ದೇಶೀಯ ವಿನ್ಯಾಸದ ಯುದ್ಧದ ಹೆಲಿಕಾಪ್ಟರ್ ರೂಪುಗೊಂಡ ಕಥನ




**ಭಾರತೀಯ ಸೇನೆಯಲ್ಲೀಗ 'ಪ್ರಚಂಡ ಪರ್ವ'. ಅತ್ಯಾಧುನಿಕ ತಂತ್ರಜ್ಞಾನವನ್ನು, ಸಂಕೀರ್ಣ ಸೂಕ್ಷ್ಮ ಸಂವೇದಕಗಳನ್ನು, ಘಾತಕ ಅಸ್ತ್ರಶಸ್ತ್ರಗಳನ್ನು ಅಳವಡಿಸಿಕೊಂಡ ಈ 'ಪ್ರಚಂಡ', ಜಗತ್ತಿನ ತನ್ನ ವರ್ಗದ ಹೆಲಿಕಾಪ್ಟರುಗಳ ಸಾಲಿನಲ್ಲಿ ಮುಂಚೂಣಿಯಲ್ಲಿ ನಿಲ್ಲಬಲ್ಲದು. ಸಿಯಾಚಿನ್‌ನಂತಹ ಅತಿ ಎತ್ತರದ ಪರ್ವತ ಪ್ರದೇಶದಲ್ಲಿ, 5000 ಮೀಟರ್ ಎತ್ತರದಲ್ಲಿಯೂ ಅಸ್ತ್ರಶಸ್ತ್ರಗಳ ಭಾರವನ್ನು ಹೊತ್ತು, ಹಾರಿ–ಇಳಿಯಬಲ್ಲ ಸಾಮರ್ಥ್ಯವುಳ್ಳ ಜಗತ್ತಿನ ಏಕೈಕ ಯುದ್ಧದ ಹೆಲಿಕಾಪ್ಟರ್ ಇದು. ಭಾರತದ ಹೆಮ್ಮೆಯ ಈ ದೇಶೀಯ ಹೆಲಿಕಾಪ್ಟರ್, ಕನ್ನಡ ನೆಲದ ಕೊಡುಗೆ. ಭಾರತವನ್ನು ಆತ್ಮನಿರ್ಭರತೆಯ ಹಾದಿಯಲ್ಲಿ ಸ್ವಾತಂತ್ರ್ಯಪೂರ್ವದ ವರ್ಷಗಳಿಂದಲೇ ನಡೆಸುತ್ತಾ ಬಂದ, 82 ವರ್ಷಗಳಿಂದ ಸೇವಾನಿರತವಾದ 'ಹಿಂದೂಸ್ತಾನ್ ಏರೊನಾಟಿಕಲ್ ಲಿಮಿಟೆಡ್'ನ ಹೆಮ್ಮೆಯ ಸಾಧನೆ.**

**ನೇಮಿಚಂದ್ರ**

ಲೇಖಕಿ ಬೆಂಗಳೂರಿನ ಎಚ್.ಎ.ಎಲ್ ಸಂಸ್ಥೆಯಲ್ಲಿ ಉನ್ನತ ತಂತ್ರಜ್ಞ ಅಧಿಕಾರಿಯಾಗಿ, ಹೆಲಿಕಾಪ್ಟರ್ ಡಿಸೈನ್ ಬ್ಯೂರೊದಲ್ಲಿ ಮುಖ್ಯ ವ್ಯವಸ್ಥಾಪಕಿಯಾಗಿ ಕಾರ್ಯ ನಿರ್ವಹಿಸಿದವರು